ಅದಕ್ಕೂ ಮೈಗೂಡುವುದು ಬೇಡೇನೂ? ಹೀಗೆ ಮಾಡುವುದರಿಂದ ಅದು ಸಂತೃಪ್ತವಾಗಿ ಇದ್ದ ಕಡೆ ಹೋದ ಕಡೆಯಲ್ಲಿ ಸುಖ ಶಾಂತಿ ನೆಲೆಸಿರುತ್ತದೆ. ಮನೆಯು ಸಮೃದ್ಧಿಯಾಗುತ್ತದೆ. ಲಕ್ಷ್ಮಮ್ಮ ತಾಂಡವ ಆಡುತ್ತಾಳೆ ಎಂದು ಬಗೆಬಗೆಯಾಗಿ ಬಣ್ಣ ಕಟ್ಟಿ ತನ್ನ ಸಂಚಿಕೆ ಹೂಡಿದ.

ಅಪ್ಪ ಅವನನ್ನು ನಿಧಾನವಾಗಿ ಮೇಲಿಂದ ಕೆಳಗೊಮ್ಮೆ ನೋಡಿದರು. ನಗಬೇಕೋ ಅಳಬೇಕೋ ತಿಳಿಯದೆ ಅಮ್ಮನತ್ತ ತಿರುಗಿದರು. ಅಮ್ಮನಿಗೂ ಏನೂ ತೋಚದೆ ನಿರ್ಲಿಪ್ತರಾದರು. ಅಲ್ಲಾ ಇವನು ಹಾಕೋ ಎಲೆಅಡಿಕೆಗೆಂದೇ ನಮ್ಮ ಮನೆಗೆ ಬರುತ್ತಾನೆ. ಈತ ಹಾಕಿರುವ ಬನಿಯನ್ ಬಣ್ಣಗೆಟ್ಟು ಒಗೆಯದೇ ಅದೆಷ್ಟೋ ದಿನವಾಗಿದ್ದ ಅಂಗಿಯ ಒಳಗಿಂದ ಎದ್ದು ಕಾಣುತ್ತಿದೆ. ತೊಟ್ಟಿರುವ ಪಟಾಪಟ್ಟೆ ಚಡ್ಡಿ ತನ್ನ ಸೇವೆಯನ್ನು ಈತನ ಮುಕಳಿಗೆ ಸಲ್ಲಿಸಿ ಸಲ್ಲಿಸಿ ಜೋರು ಗಾಳಿ ಬೀಸಿದರೆ ಹರಿದು ಉದುರುವಂತಿದೆ. ಬಾಯಲ್ಲಿನ ಎಲೆಯಡಿಕೆ ಕಲೆ ತುಟಿಯಿಂದ ನೆಗೆದು ಹಾರಿದ ರಭಸಕ್ಕೆ ನೆರೆತ ಗಡ್ಡದಲ್ಲಿ ಚಿತ್ತಾರ ಮೂಡಿಸಿ ತನ್ನ ಕಲಾಭಿಮಾನ ಮೆರೆದಿದೆ. ಅಲ್ಲಿ ತನ್ನ ಕಲಾನೈಪುಣ್ಯತೆಯನ್ನು ತೋರಿದ ಬಳಿಕ ಅಷ್ಟಕ್ಕೆ ಸುಮ್ಮನಾಗದೆ ಅದು ಮುಂದುವರಿದು ಮತ್ತೇನೂ ಮಾಡಲು ತೋಚದೆ ಅಲ್ಲಲ್ಲಿ ಹೆಪ್ಪುಗಟ್ಟಿ ಕರಕಾಗಿ ಕುಳಿತಿದೆ. ಒಮ್ಮೆಲೆ ನೋಡಿದವರು ಈತ ಯುದ್ಧದಲ್ಲಿ ಹೋರಾಡಿದ ಸೈನಿಕನಿರಬಹುದೇ? ಅಥವಾ ಯುದ್ಧ ಗಾಯಾಳಾಗಿರಬಹುದೇ? ಎಂದೇ ಯೋಚಿಸುತ್ತಾರೆ. ಇನ್ನು ಈತನ ದಂತಪಂಕ್ತಿ. ಆಹಾ! ಇದೇನು ಕೋಟೆ ಕೊತ್ತಲ ಕಣಿವೆ ಮಾರ್ಗ ಇರುವ ಹಾಗಿದೆಯೆಲ್ಲಾ? ರಹಸ್ಯ ಗುಹಾ ಮಾರ್ಗಗಳೇನಾದರೂ ಇಲ್ಲಿ ನೆಲೆಸಿರಬಹುದೇ? ಇದನ್ನು ಏಕಾಂತ ಸ್ಥಳವೆಂದು ತಿಳಿದು ಒಳಗೆ ಯಾರಾದರೂ ಮುನಿವರ್ಯರು ತಪಸ್ಸಿಗೆ ಕುಳಿತಿರಬಹುದೇ? ರಾಜನ ಯಾವುದಾದರೂ ಕಳ್ಳಕಿಂಡಿಯೇನಾದರೂ ಇಲ್ಲಿದ್ದೀತಾ? ಅಥವಾ ಪಳಯುಳಿಕೆ ಕಾಲದ ಶಿಲಾಶಾಸನವೇ? ಕಲ್ಗೋರಿ ಇರಬಹುದೇ? ಮಾಸ್ತಿಗಲ್ಲು? ವೀರಮಾಸ್ತಿಗಲ್ಲು? ಎನ್ನುವ ಹಾಗೆ ಎದುರಿನವನನ್ನು ಪರಿಭ್ರಮಣೆಗೊಳಪಡಿಸುವುದಂತು ನಿರ್ವಿವಾದ. ಇನ್ನು ಅವನ ಬಾಯಿಂದ ಪಸರಿಸುವ ದೇವಲೋಕಂ ಇಂದ್ರಾಲೋಕಂ ಸಂಚಾರಿತ ಸುವಾಸನೆಯಂತು ಎದುರಿಗೆ ನಿಂತವರ ಜಂಘಾಬಲವನ್ನೆ ಉಡುಗಿಸುವಂತಿದೆ. ತಲೆಯಲ್ಲಿ ಹುಲುಸಾಗಿ ಬೆಳೆದಿರುವ ಕೇಶರಾಶಿ ಎಂದೋ ಇಟ್ಟ ಹರಳೆಣ್ಣೆಗೆ ಜಡ್ಡುಗಟ್ಟಿ ಮೈಸೂರು ಹುಲಿ ಟಿಪ್ಪುವಿನ ಖಡ್ಗವನ್ನು ನೆನಪಿಗೆ ತರುವಂತಿದೆ. ಆತನ ಇನ್ನೂ ಹಲವಾರು ಚರಿಯನ್ನು ಹೇಳಿದರೆ ಅದೇ ಒಂದು ಘನಘೋರ ಕಥೆಯಾಗುತ್ತದೆ.

ಇಂತವನು ಒಂಟಿಕಲ್ಲಿನ ಉಂಗುರವನ್ನು ಅಡವಿಟ್ಟುಕೊಂಡು ನನಗೇ ದುಡ್ಡೆಣಿಸುವ ಹಾಗಾದನಾ? ಎಂದು ಅಪ್ಪ ಚಿಂತೆಗೀಡಾದರು. ಅಪ್ಪನ ಚಿಂತೆ ಅರಿತವನಂತೆ, ಅಣ್ಣಾ ನೀವೇನೂ ಯೋಚಿಸದಿರಿ. ನಾನು ಹೇಳುವುದೆಲ್ಲಾ ಸತ್ಯ. ಸತ್ಯವನ್ನಲ್ಲದೆ ಬೇರೇನೂ ಈ ಬಚ್ಚ ಹೇಳುವುದಿಲ್ಲ. ನಿಶ್ಚಿಂತೆಯಿಂದ ನಿಮ್ಮ ಒಂಟಿಕಲ್ಲನ್ನು ನನ್ನ ಜೊತೆ ಕಳುಹಿಸಿಕೊಡಿ. ನಾನದನ್ನು ಹುಷಾರಾಗಿರಿಸುತ್ತೀನಿ. ನನಗೇನೂ ವರದಕ್ಷಿಣೆ ಬೇಡ. ಅಯ್ಯೋ ಅದನ್ನು ನಿಮ್ಮಿಂದ ತಗೊಂಡು ನಾನ್ಯಾವ ನರಕಕ್ಕೋಗ್ಲಿ? ನಾನಿತ್ತ ಬಾಬತ್ತನ್ನು ನನಗೆ ಹಿಂದಿರುಗಿಸಿದರೆ ಆಯ್ತು ಅಂದ. ಇವನೇನು ತಮಾಷೆ ಮಾಡುತ್ತಿರಬಹುದಾ ಎಂದೆನ್ನಿಸಿ, ಅಪ್ಪ ಅಮ್ಮನ ಬಳಿ ಈ ವಿಷಯವನ್ನು ಸಮಾಲೋಚನೆಗೈಯ್ಯಲು, ಅವನು ನೋಡಲು ವಿಕಾರವಾಗಿದ್ದಾನೆ. ಆದರೆ ಕೆಟ್ಟವನಲ್ಲ. ನಮ್ಮ ಕಷ್ಟಕ್ಕೆ ಆ ಭಗವಂತನು ಚಂಪಾಲಾಲನ ರೂಪದಲ್ಲಿ ಹೀಗೆ ಬಂದು ಸಹಾಯ ಮಾಡುತ್ತಿರಬಹುದೆಂದು ನೀವ್ಯಾಕೆ ಯೋಚಿಸುವುದಿಲ್ಲ? ಎಂದು ಅಪ್ಪನನ್ನೇ ಮರು ಪ್ರಶ್ನಿಸಿದರು ಅಮ್ಮ.

**ಪ್ರೀತಿ**

ಎರಡು ಹೃದಯಗಳ
ನಡುವಿನ
ರಹಸ್ಯ
ಪಿಸುಮಾತು!

★ ಕೆ.ಬಿ.ರಂಗಸ್ವಾಮಿ




ಸರಿ ಅಮ್ಮನೇ ಹೀಗೆಂದ ಮೇಲೆ ಅಪ್ಪ, ಮಗಳನ್ನು ಗಂಡನ ಮನೆಗೆ ಕಳುಹುವ ಶೋಕಸಾಗರದಲ್ಲಿ ಮಿಂದೆದ್ದು ಒಂಟಿಕಲ್ಲನ್ನು ಬಚ್ಚನಿಗೆ ಅಡವಿಡುವ ಪ್ರಕ್ರಿಯೆಯಂ ಕೈಗೊಂಡರೆಂಬಲ್ಲಿಗೆ ಉಂಗುರದ ಪ್ರಥಮೋಧ್ಯಾಯ ಪೂರ್ಣಗೊಂಡಿತು.

ಹೊಸಳ್ಳಿ ಅಚಾರ್ರು ಊರಿಗೇ ಸಿದ್ಧ ಪ್ರಸಿದ್ಧ ಚಿನ್ನದಂಗಡಿಯನ್ನಿಟ್ಟು ಹಲವು ವರ್ಷಗಳಿಂದ ವ್ಯವಹಾರ ನಡೆಸುತ್ತಿರಲು, ತನ್ನ ಕೈಕೆಳಗೆ ಹಲವಾರು ಅಕ್ಕಸಾಲಿಗರನ್ನು ಊಟ ವಸತಿಯಿತ್ತು ಕೌಶಲ್ಯೋಪರಿ ಕೆಲಸನ್ನು ಮಾಡಿಸಿ ಹೊಸ ಹೊಸ ವಿನ್ಯಾಸವನ್ನೇರ್ಪಡಿಸುವ ಶಿಲ್ಪಕಲಾ ಪ್ರೋತ್ಸಾಹಕರೆಂಬ ಬಿರುದು ಬಾವಲಿಯನ್ನು ಅಕ್ಕಪಕ್ಕದ ಹಳ್ಳಿಯ ಜನರಿಂದ ಪಡೆದಿರಲು, ಅವರ ಹಲವು ಅಕ್ಕಸಾಲಿಗಳ ಪೈಕಿ ಒಬ್ಬನಾದ ಜಕ್ಕನ ಬಳಿ ತಾತ್ಕಾಲಿಕ ಶಿಷ್ಯ ವೃತ್ತಿ ಮಾಡುತ್ತಾ, ಉಳಿದ ವೇಳೆಯಲ್ಲಿ ಅವರಿವರ ಹೊಲಕ್ಕೆ ಕೆಲಸಕ್ಕೆ ಹೋಗುತ್ತಾ, ತನ್ನ ಒಕ್ಕಲೆಜಮಾನನ ಕಣ್ತಪ್ಪಿಸಿ ಓಡಾಡುತ್ತಾ ಕೊಡಬೇಕಾದ ಸಾಲವನ್ನು ತೀರಿಸದೆ, ಹಳ್ಳಿಯ ಎಲ್ಲಾ ಹಳೇಪೈಕದ ಕೆಲಸಕ್ಕೆ ಬಾರದ ಮುದುಕರ ಪಾಲಿನ ಕಾಯಂ ವರ್ತಮಾನ ಸುದ್ದಿ ಪ್ರವರ್ತಕನಾಗಿ, ಹಳ್ಳಿಯ ನಿರುದ್ಯೋಗಿ ಯುವಕರ ಅಧ್ಯಕ್ಷನಾಗಿ, ಕಳ್ಳಭಟ್ಟಿ ಶೇಂದಿ ಕಾಯಿಸುವ ಕಲ್ಲಪ್ಪನ ಸಹಚರನಾಗಿ ಈ ಬಹು ವಿಧ ರೂಪದಿ ತನ್ನ ಸ್ಥಾನ ಸಂಸ್ಥಾಪಿಸಿಕೊಂಡವನೇ ಈ ಬಚ್ಚ ಅಲಿಯಾಸ್ ಶೇಂದಿ ಬಚ್ಚಪ್ಪ.

ಇಂತಹ ಹಲವು ವೃತ್ತಿಯನ್ನು ಅಸಾಮಾನ್ಯ ಪ್ರವೃತ್ತಿಯನ್ನು ಅಲಂಕರಿಸಿರುವ ಬಚ್ಚ ತಾಲೂಕು ಕೇಂದ್ರವಾದ ನಮ್ಮೂರಿಗೆ ರಾಜಕಾರಣದ ಸಲುವಾಗಿಯಾದರೂ, ಹಳ್ಳಿಯ ವ್ಯಾಜ್ಯಗಳನ್ನು ಬಗೆಹರಿಸುವ ಪ್ರವರ್ತಕನಾಗಿ ಮುನ್ಸೀಫ್ ಕೋರ್ಟಿನ ಅಂಗಳದಲ್ಲಿ ಕಾಣಿಸಿಕೊಳ್ಳುವುದಕ್ಕಾಗಿಯೂ, ತಾಲ್ಲೂಕಾಫೀಸಿನ ಹಲವು ಇಲಾಖಾ ಅಧಿಕಾರಿಗಳ ಜೊತೆ ಹಾಜರಾಗಿ ಯಾರದ್ದೋ ಪಡಿತರ ಚೀಟಿ ವ್ಯವಸ್ಥೆ ಮಾಡುವುದಕ್ಕಾಗಿಯೂ, ಪಿಂಚಣಿ, ವಿಧವಾ ವೇತನದಂತಹ ಪವಿತ್ರ ಕೈಂಕರ್ಯ ಮಾಡಿಕೊಟ್ಟು ಅವರಿಂದ ತನ್ನ ಎಲೆ ಅಡಿಕೆಗಾಗುವಷ್ಟು ಮನಿಯನ್ನು ಹುಟ್ಟಿಸಿಕೊಳ್ಳುವುದಕ್ಕಾಗಿಯೂ, ಹಳ್ಳಿಯ ಅನಕ್ಷರಸ್ಥ ಮಂದಿಗೆ ಸರಕಾರ ಅನಧಿಕೃತವಾಗಿ ನೇಮಿಸಿದ ಸಾರ್ವಜನಿಕ ಸಂಪರ್ಕಾಧಿಕಾರಿಯಾಗಿ ಬಳ್ಳಾಪುರಕ್ಕೆ ದಿನಂ ಪ್ರತಿ ಬರುತ್ತಲೇ ಇರುತ್ತಲಿದ್ದ. ಹಾಗೆ ಬಂದವನು ಯಾವತ್ತಾದರೊಂದು ದಿನ ಪ್ರಜಾಪ್ರಭುತ್ವದ ಪ್ರಜೆಗಳ ಸೇವಾ ಕೈಂಕರ್ಯ ಅಷ್ಟಾಗಿ ಇಲ್ಲದಿದ್ದರೆ ನಮ್ಮ ತಂದೆಯವರನ್ನು ಹುಡುಕಿಕೊಂಡು ಮಾತನಾಡಿಸುವ ನೆಪದಲ್ಲಿ, ತನ್ನ ಬಗ್ಗೆ ತಾನು ಇಂತಹ ಕೆಲಸ ಮಾಡಿದೆ, ಅಂತಹ ಕೆಲಸಕ್ಕೆ ಕೈಹಚ್ಚಿರುವೆ, ಆ ಸಾಹೇಬರು ನನ್ನ ಜೇಬಲ್ಲಿರುವರು, ನಾನು ಅವರ ಬುಟ್ಟಿಯೊಳಗಿರುವೆ, ನಾನು ಊದಿದಂತೆ ಅವರೂ, ಅವರು ಆಡಿಸಿದಂತೆ ನಾನು..ಹೀಗೆ ಕಟ್ಟೆ ಪುರಾಣ ಹೇಳಲು, ಬಡಾಯಿ ಕೊಚ್ಚಲು, ಎಲೆಯಡಿಕೆ ನಲುಮಲು ನಮ್ಮ ಮನೆಗೆ ಆಗಾಗ್ಗೆ ಬರುತ್ತಲಿದ್ದನು. ಅದ್ಹೇಗೆ ಅಪ್ಪನಿಗೆ ಪರಿಚಯವಾಯಿತೋ ತಿಳಿಯದು. ಅಂತೂ ಪರಿಚಯವಿದೆ.

ಈ ಎಲ್ಲಾ ಬಹುಮುಖ ಕೆಲಸವನ್ನು ಮಾಡುತಲಿದ್ದಾಗ್ಯೂ ಬಚ್ಚನಿಗೆ ಇನ್ನೊಂದೆರೆದು ಮೂರು ಅಗೋಚರ ವೃತ್ತಿಗಳಿದ್ದವು. ಅವೆಂದರೆ ಬಡ್ಡಿ ವ್ಯವಹಾರ ಮತ್ತು ಚಿನ್ನ ಬೆಳ್ಳಿ ಮುಂತಾದ ಬೆಲೆಬಾಳುವ ಒಡವೆ ವಸ್ತುವನ್ನು ಅಡಮಾನಿಕೆ ಇರಿಸಿಕೊಂಡು ಮನಿ ಕೊಡುವುದು. ಇದೆಲ್ಲಾ ನಿಂಗ್ಯಾಕಯ್ಯ ಎಂದು ಅಪ್ಪ ಅಂದರೆ, ಉದ್ದುದ್ದ ಭಾಷಣ ಮಾಡಿ ತಾನು ಮಾಡುತ್ತಿರುವ ಕೆಲಸಗಳು ಉತ್ತಮವಾದದ್ದೆಂದು, ಅದನ್ನು ಬಿಡಲಾಗಲಿ ಅಥವಾ ಬೇರೆ ಉದ್ಯೋಗ ಮಾಡಲು ನನ್ನ ಹಳ್ಳಿಯ ಜನರೇ ಒಪ್ಪುವುದಿಲ್ಲವೆಂದು, ಹಾಗೊಂದು ಸಾರಿ ಬೇರೆ ಉದ್ಯೋಗ ಮಾಡಲು ಹೋಗಿ ತನ್ನ ಹಳ್ಳಿಯ ಜನ ಒಂದೇ ಕಣ್ಣಿನಲ್ಲಿ ಅಳುತ್ತಾ, ಅಬಾಲ ವೃದ್ಧರಾದಿಯಾಗಿ ನನ್ನ ಮನೆ ಮುಂದೆ ಬಂದು ಧರಣಿ ಮಾಡುತ್ತಾ ನೀನು ಮೊದಲಿನ ಬಚ್ಚನಂತಿರದೇ ಹೋದಲ್ಲಿ ತಾವೆಲ್ಲರೂ ಅನಿರ್ದಿಷ್ಟ ಉಪವಾಸ ಸತ್ಯಾಗ್ರಹ ಮಾಡುವುದಾಗಿ ಬೆದರಿಕೆ ಹಾಕಿದಂದಿನಿಂದ ಲಾಗಾಯ್ತು ನಾನು ಜನಾನುರಾಗಿ ಆಗಿಬಿಟ್ಟಿರುವೆ, ನನಗೂ ನನ್ನ ಹಳ್ಳಿಯ ಮುಗುದ ಜನರ ಮನ ನೋಯಿಸಲು ಇಷ್ಟವಿಲ್ಲವೆಂದೂ, ತಾನು ಬೇರೆ ಉದ್ಯೋಗ ಮಾಡುವ ನಿರ್ಧಾರದಿಂದ ಹಿಂದೆ ಸರಿದು, ಜೀವ ಇರೋ ತಂಕ ದೇವರು ಕೊಟ್ಟ ಈ ಜೀವನವನ್ನು ಜನಸೇವೆಗೆ ಮುಡುಪಿಟ್ಟಿರುವೆ ಎಂದು ಹೇಳುತ್ತಿದ್ದನು. ಹೀಗೆ ತನ್ನ ನಿರರ್ಗಳ ಬುಡುಬುಡಿಕೆ ಮಾತುಗಳಿಂದ ಎದುರಿನವ ಏನಂದುಕೊಳ್ಳುವ ಎಂದು ಎಂದೂ ಯೋಚಿಸದ ಆತನ ಪ್ರಹರೀ ವರ್ತನೆ